ಸುರೇಶ ನಾಗಲಮಡಿಕೆ

# ವೈದಿಕವೆಂಬ ತರ್ಕವೂ ಅವೈದಿಕವೆಂಬ ಸೃಜನಶೀಲತೆಯೂ

ಬಹುಕಾಲದಿಂದಲೂ ರೂಢಿಯಲ್ಲಿರುವ 'ವೈದಿಕ' ಮತ್ತು 'ಅವೈದಿಕ' ಎಂಬ ಪರಿಕಲ್ಪನೆಗಳನ್ನು ವ್ಯಾಖ್ಯಾನಿಸುವ, ವಿವರಿಸುವ ಬಗೆಗಳು ಹಲವು ಬಾರಿ ಗೊಂದಲಗಳಿಗೆ ದಾರಿ ಮಾಡಿಕೊಟ್ಟಿವೆ. ವೈದಿಕ ಎಂಬುದು ಇದ್ದರೆ, ಅವೈದಿಕವೆಂಬುದು ಸೃಷ್ಟಿಯಾಗಿದ್ದು ಎಲ್ಲಿ? ಕಾರಣಗಳೇನು? ಎಂಬ ಪ್ರಶ್ನೆಗಳನ್ನು ಬಿಡಿಸಿಕೊಳ್ಳುವುದರ ಕುರಿತಂತೆ ಇಂದಿಗೂ ಹಲ ಬಗೆಯ ತಾತ್ತ್ವಿಕ ಚರ್ಚೆಗಳು ನಡೆಯುತ್ತಿವೆ. ಈ ರೀತಿಯ ಚರ್ಚೆಯೊಂದು 1997ರಲ್ಲಿ ಉಡುಪಿಯಲ್ಲಿ (ಮುರಾರಿ ಬಲ್ಲಾಳ ಚಿಂತನ ಫೌಂಡೇಶನ್ ಮತ್ತು ರಥಬೀದಿ ಗೆಳೆಯರ ಸಹಯೋಗದಲ್ಲಿ ನಡೆದ ವಿಚಾರ ಸಂಕಿರಣ) ನಡೆಯಿತು. ಆ ವಿಚಾರ ಸಂಕಿರಣದಲ್ಲಿ ಡಿ.ಆರ್. ನಾಗರಾಜ್ ಒಳಗೊಂಡಂತೆ ಶ್ರೀಪತಿ ತಂತ್ರಿ, ಅವಧಾನಿ, ರಾಜನುರುಕ್ಕಳ್, ಯು.ಆರ್. ಅನಂತಮೂರ್ತಿ ಮುಂತಾದ ವಿದ್ವಾಂಸರು ಚರ್ಚೆಯಲ್ಲಿದ್ದರು. ಇವರು ಆಡಿದ ಮಾತುಗಳನ್ನು ಬರಹರೂಪಕ್ಕೆ (ಪ್ರಜ್ಞಾ ಶಾಸ್ತ್ರೀ) ತಂದು 'ಋತುಮಾನ' ಬಳಗದವರು ಪ್ರಕಟಿಸಿದ್ದಾರೆ. ಈ ಸಂವಾದವನ್ನು ಅವರು 'ಪ್ರಾಚೀನ ಭಾರತೀಯ ವೈದಿಕ–ಅವೈದಿಕ ಪರಂಪರೆಯಲ್ಲಿ ನಡೆದ ವಾಗ್ವಾದದ ಕುರಿತು' ಎಂಬ ವಿಷಯವನ್ನೊಳಗೊಂಡಿದೆ ಎಂದು ಹೇಳಿದರೂ ಬಹುಪಾಲು ಚರ್ಚೆ ಇದರ ಸಮಗ್ರನೋಟವನ್ನು ಕೊಡುವುದಿಲ್ಲ. ಇದನ್ನು ಮುಂದೆ ನೋಡಬಹುದು.

ಸಾಮಾನ್ಯವಾಗಿ ವೇದಗಳನ್ನು ಒಪ್ಪುವವರು, ಅನುಸರಿಸುವವರು ವೈದಿಕರೆಂದು, ಇವುಗಳಿಂದ ಹೊರತಾದವರು ಅವೈದಿಕರೆಂದು ಸಣ್ಣ ಗ್ರಹಿಕೆ. ಇದರಲ್ಲೂ ಅನೇಕ ಭಿನ್ನ ಬಿರುಕುಗಳಿವೆ. ವೇದಪೂರ್ವ, ವೇದಕಾಲೀನ ಹಾಗೂ ವೇದೋತ್ತರ ಈ ಮೂರು ಕಾಲಘಟ್ಟಗಳಲ್ಲಿ ನಡೆದ ಅನೇಕ ಬಗೆಯ ತಾತ್ತ್ವಿಕ ಭಿನ್ನಾಭಿಪ್ರಾಯಗಳು ಸೃಷ್ಟಿಗೊಂಡ ವಾಗ್ವಾದಗಳು, ಹಿಂಸೆಗಳು ಅಪಾರ ಪ್ರಮಾಣದಲ್ಲಿವೆ. ವೇದಪೂರ್ವದ ಬುಡಕಟ್ಟಿನ ಜೀವನಕ್ರಮಗಳು ಅವರ ಆಚರಣೆಗಳು, ದೈವಿಕ ಸ್ವರೂಪಗಳು ಇವೆಲ್ಲವೂ ಈ ವಿದ್ವಾಂಸರ ಚರ್ಚೆಯಲ್ಲಿ ಬಲವಾಗಿ ಬಾರದೇ ಹೋಗಿವೆ. ತೊಂಬತ್ತರ ದಶಕದಲ್ಲೂ ಈ ಕುರಿತು ಮೌನವಹಿಸಿರುವುದು ದೊಡ್ಡ ಮಿತಿ. ಮತ್ತೊಂದು ದಾರಿಗೆ ಬರುವುದಾದರೆ